# ಬರಲಿದ್ಯಾ ಪಾರದರ್ಶಕ ಫೋನ್?

ಕೀಪ್ಯಾಡ್ ಫೋನ್‌ನಿಂದ ಸ್ಮಾರ್ಟ್‌ಫೋನ್ ವರೆಗೆ ಸಾಗಿ ಬಂದ ಮೊಬೈಲ್ ಕ್ಷೇತ್ರದ ಹೊಸ ಹೊಸ ಆವಿಷ್ಕಾರಗಳ ದಣಿವು ಇನ್ನೂ ನೀಗಿದಂತಿಲ್ಲ. ಸ್ಮಾರ್ಟ್‌ಫೋನ್ ಕ್ಷೇತ್ರದಲ್ಲಿ ಆವಿಷ್ಕಾರ ಮಾಡುವಂತಹದ್ದು ಇನ್ನೇನೂ ಇಲ್ಲ ಎನ್ನುವಷ್ಟು ತಂತ್ರಜ್ಞಾನ ಪರಿಚಯಗೊಂಡಿದೆ. ಹೀಗಿರುವಾಗ ಟ್ವಿಟರ್‌ನಲ್ಲಿ ಟ್ರೆಂಡ್ ಆಗುತ್ತಿರುವ ಪಾರದರ್ಶಕ ಸ್ಮಾರ್ಟ್‌ಫೋನ್ ಬಳಕೆಯೊಂದರ ವಿಡಿಯೊ ಎಲ್ಲರ ಹುಬ್ಬೇರುವಂತೆ ಮಾಡಿದೆ.

ಈ 'ಪಾರದರ್ಶಕ ಸ್ಮಾರ್ಟ್‌ಫೋನ್' ಎನ್ನುವ ಕಲ್ಪನೆಯೇ ರೋಚಕ ಅನುಭವ ಕಟ್ಟಿಕೊಡುತ್ತದೆ. ಹೀಗಿರುವಾಗ, ಅಂತಹದ್ದೊಂದು ಸ್ಮಾರ್ಟ್‌ಫೋನ್ ಅನ್ನು ಅಭಿವೃದ್ಧಿಪಡಿಸಿಯೇಬಿಟ್ಟರೆ! ಇಂತಹ ಹೊಸ ಸಾಧ್ಯತೆಯತ್ತ ಸದ್ಯ ಎಲ್ಲರ ಚಿತ್ತ ಜಾರಿದೆ. ಒಂದು ವೇಳೆ ಪಾರದರ್ಶಕ ಸ್ಮಾರ್ಟ್‌ಫೋನ್ ಬಂದದ್ದೇ ಆದರೆ, ಈಗಿರುವ ಸ್ಮಾರ್ಟ್‌ಫೋನ್‌ಗಳು ಮೂಲೆಗುಂಪಾಗುವುದಂತೂ ಗ್ಯಾರಂಟಿ. ಎಲ್ಲರ ಕೈಯಲ್ಲೂ ಫಳಫಳ ಹೊಳೆಯುವ ಪಾರದರ್ಶಕ ಸ್ಮಾರ್ಟ್‌ಫೋನ್‌ಗಳೇ ಕಂಗೊಳಿಸುತ್ತವೆ.

ಇಂತಹದ್ದೊಂದು ಸಾಧ್ಯತೆಯ ಕುರಿತಾದ ವಿಡಿಯೊವನ್ನು ವಾಲಾ ಅಫ್ಷರ್ (Vala Afshar – @ValaAfshar) ಅನ್ನುವ ಟ್ವಿಟರ್ ಬಳಕೆದಾರರೊಬ್ಬರು ತನ್ನ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಈ ವಿಡಿಯೊ ಹಳೆಯದಾದರೂ ಸದ್ಯ ಟ್ರೆಂಡಿಂಗ್‌ನಲ್ಲಿದೆ. ಇದು ಜಗತ್ತಿನ ಮೊಬೈಲ್ ಕ್ಷೇತ್ರದಲ್ಲಿ ಹೊಸ ಸಂಚಲನ ಸೃಷ್ಟಿಸಿದೆಯಾದರೂ ಇದರ ಸತ್ಯಾಸತ್ಯತೆ ಬಗ್ಗೆ ಇನ್ನೂ ಸ್ಪಷ್ಟತೆ ಸಿಕ್ಕಿಲ್ಲ.





### ವಿಡಿಯೊದಲ್ಲೇನಿದೆ...

ವ್ಯಕ್ತಿಯೊಬ್ಬ ತನ್ನ ಕೈಯಲ್ಲಿ ಪಾರದರ್ಶಕ ಸ್ಮಾರ್ಟ್‌ಫೋನ್ ಹಿಡಿದಿದ್ದಾನೆ. ಗೂಗಲ್‌ನ ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಯನ್ನೊಳಗೊಂಡ ಆ ಪಾರದರ್ಶಕ ಸ್ಮಾರ್ಟ್‌ಫೋನ್ ಅನ್ನು ಸರಾಗವಾಗಿ ಬಳಸುತ್ತಿದ್ದಾನೆ. ಈ ಫೋನ್‌ಗೆ ಬ್ಯಾಟರಿ ಚಾರ್ಜ್ ಮಾಡುವ ವಿಧಾನ ಹಾಗೂ ಚಾರ್ಜರ್ ಸಹ ಪಾರದರ್ಶಕವಾಗಿದೆ.

ಇಂತಹದ್ದೊಂದು ಸ್ಮಾರ್ಟ್‌ಫೋನ್ ನೋಡುವುದೇ ವಿಶೇಷವಾಗಿದೆ. ಆದರೆ, ಈ ಪಾರದರ್ಶಕ ಸ್ಮಾರ್ಟ್‌ಫೋನ್‌ನ ಬಗ್ಗೆ ನಿಖರತೆ ಇಲ್ಲ. ಇದು ಸುಳ್ಳಾಗಿದ್ದರೂ ಇದರ ಪರಿಕಲ್ಪನೆಯು ಭವಿಷ್ಯದಲ್ಲಿ ನಿಜವಾಗಲೂಬಹುದು.

ವಿಡಿಯೊ ಲಿಂಕ್: pic.twitter.com/9iXstC7jXN

### ಚೀನಾ ಸ್ಮಾರ್ಟ್‌ಫೋನ್; ಬ್ಯಾನ್ ಬಗ್ಗೆ ವದಂತಿ

ಚೀನಾ ಮೂಲದ ಸ್ಮಾರ್ಟ್‌ಫೋನ್‌ಗಳು ಭಾರತೀಯ ಮೊಬೈಲ್ ಮಾರುಕಟ್ಟೆಯನ್ನು ಬಹುತೇಕ ಆಕ್ರಮಿಸಿವೆ. ಯಾರ ಕೈಯಲ್ಲಿ ನೋಡಿದರೂ ಚೀನಾ ಮೂಲದ ಕಂಪನಿಗಳ ಸ್ಮಾರ್ಟ್‌ಫೋನ್‌ಗಳೇ ಕಾಣುತ್ತವೆ.

ಆದರೆ, ದೇಶದ ಆಂತರಿಕ ಭದ್ರತೆಗೆ ಧಕ್ಕೆಯಾಗುತ್ತಿರುವ ಕಾರಣಕ್ಕೆ ಚೀನಾ ಮೂಲದ ಸ್ಮಾರ್ಟ್‌ಫೋನ್‌ಗಳನ್ನು ದೇಶದಲ್ಲಿ ನಿಷೇಧ ಮಾಡಲಾಗುತ್ತಿದೆ ಅನ್ನುವ ಸುದ್ದಿಯೊಂದು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದೆ. ವಾಸ್ತವದಲ್ಲಿ ಅಂತಹ ಯಾವುದೇ ನಿಷೇಧವನ್ನು ಸದ್ಯಕ್ಕೆ ಹೇರಿಲ್ಲ. ಚೀನಾ ಮೂಲದ ಪ್ರತಿಯೊಂದು ಫೋನ್‌ಗಳು ಗ್ರಾಹಕರ ವೈಯಕ್ತಿಕ ಮಾಹಿತಿಯನ್ನು ಕದಿಯುತ್ತಿವೆ. ಈ ಮಾಹಿತಿಯನ್ನು ಚೀನಾವು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಇದರಿಂದ ದೇಶದ ಆಂತರಿಕ ಭದ್ರತೆಗೆ ಹಾನಿಯಾಗಲಿದೆ ಎಂಬುದು ವದಂತಿಯ ಮುಖ್ಯಾಂಶ. ■

### ಸ್ಯಾಮ್‌ಸಂಗ್ ಇನೋವೇಶನ್ ಕ್ಯಾಂಪ್

ಟೆಲಿಕಾಂ ಕ್ಷೇತ್ರದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಹೊಸ ಹೊಸ ಆವಿಷ್ಕಾರಗಳನ್ನು ಹುಟ್ಟು ಹಾಕಲು ಸ್ಯಾಮ್‌ಸಂಗ್ ಇನೋವೇಶನ್ ಕ್ಯಾಂಪಸ್ ಅನ್ನು ಸ್ಯಾಮ್‌ಸಂಗ್ ಇಂಡಿಯಾವು ಬೆಂಗಳೂರಿನ ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಬಿಎನ್‌ಎಂಐಟಿ) ಈಚೆಗೆ ಉದ್ಘಾಟಿಸಿದೆ.

ತಂತ್ರಜ್ಞಾನ ಕ್ಷೇತ್ರದ ಅನ್ವೇಷಣೆಯನ್ನು ಪ್ರೋತ್ಸಾಹಿಸಲು, ಆ ನಿಟ್ಟಿನಲ್ಲಿ ಸಹಭಾಗಿತ್ವವನ್ನು ಉತ್ತೇಜಿಸಲು ಮತ್ತು ಭವಿಷ್ಯದ ತಂತ್ರಜ್ಞಾನ ವಲಯಗಳಾದ ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಇಂಟರ್ನೆಟ್ ಆಫ್ ದಿ ಥಿಂಗ್ಸ್, ಬಿಗ್ ಡೇಟಾ ಮತ್ತು ಕೋಡಿಂಗ್ ಹಾಗೂ ಪ್ರೋಗ್ರಾಮಿಂಗ್‌ನಲ್ಲಿ ಕ್ಷೇತ್ರದಲ್ಲಿ ಭವಿಷ್ಯದ ಎಂಜಿನಿಯರ್‌ಗಳನ್ನು ರೂಪಿಸಲು ಸ್ಯಾಮ್‌ಸಂಗ್ ಕಂಪನಿಯು ಈ ಯೋಜನೆಯನ್ನು ರೂಪಿಸಿದೆ.

ಈ ಯೋಜನೆಯನ್ವಯ ಸದ್ಯ ಬಿಎನ್‌ಎಂಐಟಿಯ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯು ಸುಧಾರಿತ ತಂತ್ರಜ್ಞಾನದ ತರಬೇತಿಯನ್ನು ಪಡೆಯುತ್ತಾರೆ. ಆರ್ಟಿಫಿಷಿಯಲ್ ಇಂಟಲಿಜೆನ್ಸ್/ ಮಷಿನ್ ಲರ್ನಿಂಗ್, ಬಿಗ್ ಡೇಟಾ ಮತ್ತು ಕೋಡಿಂಗ್ ಮತ್ತು ಪ್ರೋಗ್ರಾಮಿಂಗ್‌ನಂತಹ ಡೊಮೇನ್‌ಗಳಲ್ಲಿ ಪ್ರಾಜೆಕ್ಟ್‌ಗಳಲ್ಲಿ ಅವರು ತೊಡಗಿಕೊಳ್ಳುತ್ತಾರೆ. ಇದರಿಂದ ವಿದ್ಯಾರ್ಥಿಗಳು ಉತ್ತಮ ವೃತ್ತಿಪರರಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ ಎನ್ನುವುದು ಯೋಜನೆಯ ಉದ್ದೇಶ.

ತಂತ್ರಜ್ಞಾನ ಅಳವಡಿಕೆ, ಪ್ರಾಥಮಿಕ ಸಾಫ್ಟ್‌ವೇರ್ ಕುಶಲಗಳು ಮತ್ತು ಸುಧಾರಿತ ಸಾಮರ್ಥ್ಯಗಳಿಂದ, ವಿದ್ಯಾರ್ಥಿಗಳಿಗೆ ಅಗತ್ಯ ಕೌಶಲಗಳನ್ನು ಕಾರ್ಯಕ್ರಮದ ಅಡಿಯಲ್ಲಿ ಒದಗಿಸಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ತಂತ್ರಜ್ಞಾನ ಕ್ಷೇತ್ರದಲ್ಲಿ ಸೂಕ್ತ ಅವಕಾಶಗಳನ್ನು ಪಡೆದುಕೊಳ್ಳಬಹುದಾಗಿದೆ. ಈಗಾಗಲೇ ಈ ಕಾರ್ಯಕ್ರಮಕ್ಕೆ ನೋಂದಣಿ ಮಾಡಿಕೊಂಡ ಯುವಕರು ತರಗತಿ ಮತ್ತು ಆನ್‌ಲೈನ್ ತರಬೇತಿ ಪಡೆಯುತ್ತಾರೆ. ಸ್ಯಾಮ್‌ಸಂಗ್ ಕಂಪನಿಯ ಮತ್ತು ಬಿಎನ್‌ಎಂಐಟಿ ಮೆಂಟರ್‌ಗಳ ಮಾರ್ಗದರ್ಶನದ ಅಡಿಯಲ್ಲಿ ನೈಜ ಜಗತ್ತಿನ ಸಮಸ್ಯೆಗಳನ್ನು ಪರಿಹರಿಸಲು ಹೊಸ ಹೊಸ ಪ್ರಾಜೆಕ್ಟ್‌ಗಳಲ್ಲಿ ಕೆಲಸ ಮಾಡಲಿದ್ದಾರೆ. ■